# ಗ್ರಾಮ ಪಂಚಾಯತಿ ಮಟ್ಟದ "ಮಕ್ಕಳ ಕಾವಲು ಸಮಿತಿ ಅಥವಾ ಮಕ್ಕಳ ಹಕ್ಕುಗಳ ಸಂರಕ್ಷಣಾ ಸಮಿತಿ" ರಚನೆ ಮತ್ತು ಸದಸ್ಯರುಗಳ ವಿವರ.

ಕರ್ನಾಟಕ ಸರ್ಕಾರ

ಈ ಸಮಿತಿಯು ಪ್ರತಿ ಮೂರು ತಿಂಗಳಿಗೊಂದರಂತೆ ವರ್ಷಕ್ಕೆ 4 ಸಭೆ ನಡೆಸಿ ಕಾರ್ಯಸೂಚಿಯಲ್ಲಿ ತಿಳಿಸಿದ 30 ಅಂಶದ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿ, ಅನುಸರಣೆಯೊಂದಿಗೆ ವರದಿಗಳನ್ನು ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ಜಿಲ್ಲಾಡಳಿತ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಕಳುಹಿಸಬೇಕು. ತನ್ಮೂಲಕ ಪ್ರತಿ ಗ್ರಾಮ ಪಂಚಾಯತಿಯನ್ನು **"ಮಕ್ಕಳಿಗೆ ಸುರಕ್ಷಿತ ಹಾಗೂ ಮಕ್ಕಳ ಸ್ನೇಹಿ ಪಂಚಾಯತಿ"**ಯನ್ನಾಗಿ ಮಾಡುವುದು.
ಇದೇ ರೀತಿಯ ಸಮಿತಿಗಳು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ತಹಶೀಲ್ದಾರರು ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತವೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕರ್ನಾಟಕ ರಾಜ್ಯ ಪೊಲೀಸ್

ದುಡಿಮೆ ಬೇಡ ಶಿಕ್ಷಣ ಬೇಕು

## ಗ್ರಾಮ ಪಂಚಾಯತ್ ಮಟ್ಟದ 'ಮಕ್ಕಳ ಕಾವಲು ಸಮಿತಿ' ಅಥವಾ 'ಮಕ್ಕಳ ಹಕ್ಕುಗಳ ಸಂರಕ್ಷಣಾ ಸಮಿತಿ'

**Gram Panchayath Level**
**Child Protection Committee (CPC)**
**OR Child Rights Protectin Comiittee (CRPC)**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ– 1993 (2015ರ ತಿದ್ದುಪಡಿಯಂತೆ) 61ಎ ಪ್ರಕಾರ ಶಾಸನಬದ್ಧವಾಗಿ ಈ ಸಮಿತಿಯನ್ನು ರಚಿಸಬೇಕು.

ಈ ಸಮಿತಿ ರಚನೆಗೆ ನಿರ್ದೇಶನ/ಸುತ್ತೋಲೆ ;
ಭಾರತ ಸರ್ಕಾರದ ರಾಷ್ಟ್ರೀಯ ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆಯ (ICPS) ಮಾರ್ಗಸೂಚಿ ಹಾಗೂ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕ್ರಿಯಾಶೀಲ ಅನುಷ್ಠಾನದ ಜವಾಬ್ದಾರಿ, ಅನುಸರಣೆ, ಪ್ರಗತಿ ಪರಿಶೀಲನೆ, ಉಸ್ತುವಾರಿ ಮತ್ತು ಹೊಣೆಗಾರಿಕೆ; ಜಿಲ್ಲಾ ಪಂಚಾಯತ್, ಜಿಲ್ಲಾಡಳಿತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪೊಲೀಸ್, ಕಾರ್ಮಿಕ, **ಶಿಕ್ಷಣ** ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಸ್ಥಳೀಯ ಸಂಘಸಂಸ್ಥೆಗಳು ಹಾಗೂ ಸಮುದಾಯ.

ವೃತ್ತದಲ್ಲಿ ತಿಳಿಸಿರುವ ಎಲ್ಲಾ ಪ್ರತಿನಿಧಿಗಳನ್ನು ಕರೆದು ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ಈ ಸಮಿತಿಯನ್ನು ರಚಿಸುವುದು

- ಅಧ್ಯಕ್ಷರು ಗ್ರಾಮ ಪಂಚಾಯತ್, ಇವರು ಈ ಸಮಿತಿಯ ಅಧ್ಯಕ್ಷರು
- ಗ್ರಾಮ ಪಂಚಾಯತಿಯ ಎಲ್ಲಾ ಸದಸ್ಯರು, ಈ ಸಮಿತಿಯ ಸದಸ್ಯರುಗಳು
- ಅಂಗನವಾಡಿ ಮೇಲ್ವಿಚಾರಕರು
- ಎಲ್ಲಾ ಅಂಗನವಾಡಿ ಕಾರ್ಯಕರ್ತರು
- ಎಲ್ಲಾ ಶಾಲೆಯ ಮುಖ್ಯೋಪಾಧ್ಯಾಯರು
- ಗ್ರಾಮದ ಬೀಟ್ ಪೊಲೀಸ್
- ಆಶಾ ಕಾರ್ಯಕರ್ತರು
- ಪಂಚಾಯತ್ ವ್ಯಾಪ್ತಿಯ ಕಾರ್ಯ ನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆ–2
- ಆರೋಗ್ಯ ಕಾರ್ಯಕರ್ತರು
- ಗ್ರಾಮ ಲೆಕ್ಕಿಗರು
- 2 ಶಿಕ್ಷಣ ಪ್ರೇಮಿಗಳು
- ಯುವಕ ಸಂಘದ 4 ಸದಸ್ಯರು
- ಮಹಿಳಾ ಸಂಘದ 4 ಸದಸ್ಯರು
- ಬಾಲಕಿಯರ ಸಂಘ/ ಯುವತಿ ಮಂಡಳಿಯ 4 ಸದಸ್ಯರು
- ಪ್ರೌಢ ಶಾಲಾ ವ್ಯಾಪ್ತಿಯ ಮಕ್ಕಳು.–4. 2 ಬಾಲಕಿ, 2,ಬಾಲಕ
- ಎಲ್ಲಾ ಶಾಲೆಯ SDMC ಅಧ್ಯಕ್ಷರುಗಳು
- ಪಿಡಿಒ–ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಇವರು ಈ ಸಮಿತಿಯ ಕಾರ್ಯದರ್ಶಿಗಳು

## ವರ್ಷದ 4 ಸಭೆಗಳ ಕಾರ್ಯಸೂಚಿ–30 ಅಂಶದ ಕಾರ್ಯಕ್ರಮ.

1. ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ 'ಮಕ್ಕಳ ಕಾವಲು ಸಮಿತಿ' ರಚನೆ. (ಪಂಚಾಯತ್ ಮಟ್ಟದ ಸಮಿತಿಯಂತೆ)
2. ಗ್ರಾಮ ಪಂಚಾಯತಿ ಮಟ್ಟದಲ್ಲಿನ ಎಲ್ಲಾ 5 ವರ್ಷದೊಳಗಿನ ಮಕ್ಕಳಿಗೆ 100% ಜನನ ಪ್ರಮಾಣ ಪತ್ರ ಲಭಿಸುವಂತೆ ಮಾಡುವುದು.
3. ಎಲ್ಲಾ ಮಕ್ಕಳಿಗೆ 100% ಚುಚ್ಚುಮದ್ದು /ಲಸಿಕೆ ಲಭಿಸುವಂತೆ ಮಾಡಿ, ಅನುಸರಣೆಯೊಂದಿಗೆ ಖಾತ್ರಿ ಪಡಿಸಿ ನಿರಂತರ ನಿಗಾವಹಿಸುವುದು.
4. 3 ರಿಂದ 6 ವರ್ಷದೊಳಗಿನ ಎಲ್ಲಾ ಮಕ್ಕಳು 100% ಅಂಗನವಾಡಿಗೆ ದಾಖಲಾತಿ, 100% ಹಾಜರಾತಿ, ಅನುಸರಣೆ ಮತ್ತು ನಿರಂತರ ನಿಗಾವಹಿಸವುದು.
5. 6 ರಿಂದ 18 ವರ್ಷದೊಳಗಿನ ಮಕ್ಕಳು 100% ಶಾಲೆಗೆ ದಾಖಲಾತಿ, 100% ಹಾಜರಾತಿ, ಅನುಸರಣೆ ಮತ್ತು ನಿರಂತರ ನಿಗಾವಹಿಸುವುದು.
6. ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮತ್ತು ಮಕ್ಕಳು ಶಾಲೆ ಬಿಡುವುದನ್ನು ಸಂಪೂರ್ಣ ತಡೆಯುವುದು.
7. ಸಂಪೂರ್ಣ ಬಾಲ್ಯವಿವಾಹ ತಡೆಯೊಂದಿಗೆ ಬಾಲ ಕಾರ್ಮಿಕ ಮತ್ತು ಬಾಲ್ಯವಿವಾಹ ಮುಕ್ತ ಪಂಚಾಯತ್‌ಗೆ ಕ್ರಮ.
8. ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ.
9. ಮಕ್ಕಳ ಅಪೌಷ್ಟಿಕತೆ ನಿವಾರಣೆ.
10. ಗುಳೆ/ವಲಸೆ ತಡೆಗೆ ಕ್ರಮ.
11. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ.
12. ವಿಶೇಷ ಸಾಮರ್ಥ್ಯವುಳ್ಳ ಮಕ್ಕಳ ರಕ್ಷಣೆ.
13. 100% ಮದುವೆ ನೊಂದಣಿಗೆ ಕ್ರಮ.
14. ಶಾಲೆಗಳಿಗೆ ಮೂಲಭೂತ ಸೌಕರ್ಯಕ್ಕೆ ಕ್ರಮ.
15. ಮಾರಕ ರೋಗಗಳ ತಡೆ. (ಹೆಚ್‌ಐವಿ/ಏಡ್ಸ್ ಮುಂತಾದ)
16. ಭಿಕ್ಷಾಟನೆ/ಬೀದಿ–ಚಿಂದಿ ಆಯುವ ಮಕ್ಕಳ ರಕ್ಷಣೆ–ಶಿಕ್ಷಣ.
17. ಎಲ್ಲಾ ಶಾಲೆಗಳಲ್ಲಿನ ಎಸ್‌ಡಿಎಮ್‌ಸಿ ಯ ಬಲವರ್ಧನೆ.
18. ವಿಕೃತ ಮೂಢನಂಬಿಕೆಗಳಿಗೆ ಹಾಗೂ ಅವಗಡಗಳಿಗೆ 18 ವರ್ಷದೊಳಗಿನ ಮಕ್ಕಳು ಬಲಿಯಾಗದಂತೆ ರಕ್ಷಣೆ ಮತ್ತು ಕ್ರಮ.
19. ಗ್ರಾಮ ಪಂಚಾಯತ್ ವ್ಯಾಪ್ತಿಯ 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ, ಗುಣಮಟ್ಟದ ಶಿಕ್ಷಣಕ್ಕಾಗಿ ಸಮುದಾಯದ, ಇಲಾಖೆಗಳ, ನಾಗರಿಕ ಸಂಘ ಸಂಸ್ಥೆಗಳ ಪಾಲುದಾರಿಕೆ, ಸಹಭಾಗಿತ್ವ, ಸಮನ್ವಯತೆ ಮತ್ತು ಹೊಣೆಗಾರಿಕೆಗೆ ಕ್ರಮ.
20. ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯುವ ಸಾಮೂಹಿಕ ಮದುವೆಗಳಲ್ಲಿ ಬಾಲ್ಯ ವಿವಾಹಗಳು ಜರುಗದಂತೆ ನಿಗಾವಹಿಸುವುದು.
21. ಪಂಚಾಯತ್ ವ್ಯಾಪ್ತಿಯಲ್ಲಿ ನಿಜವಾಗಿ ಅಗತ್ಯವಿರುವ ಮಕ್ಕಳಿಗೆ ಹಾಗೂ ಬಾಲ್ಯ ವಿವಾಹ ಮತ್ತು ಬಾಲ ಕಾರ್ಮಿಕತೆಯಿಂದ ಮುಕ್ತಿ ಪಡೆದ ಮಕ್ಕಳಿಗೆ ವಿವಿಧ ಹಾಸ್ಟೆಲ್‌ಗಲ್ಲಿ ಶಿಕ್ಷಣ ಮತ್ತು ವಸತಿ ಸೌಲಭ್ಯ ಕಲ್ಪಿಸುವುದು.
22. ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಸರಕಾರಿ ಸೌಲಭ್ಯಗಳನ್ನು ನೀಡುವಾಗ ಬಾಲ ಕಾರ್ಮಿಕತೆ ಮತ್ತು ಬಾಲ್ಯ ವಿವಾಹದಿಂದ ಮುಕ್ತಿ ಪಡೆದ ಮಕ್ಕಳ ಕುಟುಂಬಗಳಿಗೆ ಆದ್ಯತೆ ಅನುಸಾರ, ಆಯ್ಕೆ ಮಾಡಿ ನೀಡುವುದು.
23. ಪಂಚಾಯತ್ ವ್ಯಾಪ್ತಿಯಲ್ಲಿ ಸರಕಾರಿ ಸೌಲಭ್ಯಗಳನ್ನು ನೀಡುವಾಗ ಫಲಾನುಭವಿಗಳಿಂದ ಅವರ ಕುಟುಂಬಗಳಲ್ಲಿ ಬಾಲ ಕಾರ್ಮಿಕತೆ ಮತ್ತು ಬಾಲ್ಯ ವಿವಾಹಕ್ಕೆ ಅವಕಾಶವಿಲ್ಲದಂತೆ ಕರಾರು ಪತ್ರ ಬರೆಯಿಸಿಕೊಳ್ಳುವುದು.
24. ಮಕ್ಕಳನ್ನು ದುಡಿಸುವ ಮಾಲೀಕರುಗಳಿಗೆ ಮತ್ತು ಬಾಲ್ಯ ವಿವಾಹವನ್ನು ನಡೆಸುವವರಿಗೆ ಹಾಗೂ ಸಹಕರಿಸುವವರೆಲ್ಲರಿಗೂ ಕಠಿಣ ಕ್ರಮಕ್ಕೆ ಮುಂದಾಗುವುದು.
25. ಎಲ್ಲಾ ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ನೀತಿ ಅನುಷ್ಠಾನ, ಸುರಕ್ಷತಾ ಸಮಿತಿ ಹಾಗೂ ಮಕ್ಕಳ ಹಕ್ಕುಗಳ ಕ್ಲಬ್ ರಚನೆಗೆ ಸೂಕ್ತ ಕ್ರಮ ಮತ್ತು ಸಹಕಾರ.
26. ಮಕ್ಕಳ ಕಾವಲು ಸಮಿತಿಯ ಅಡಿಯಲ್ಲಿ ಉಪ ಸಮಿತಿಯಾಗಿ "ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿ"ಯ ರಚನೆ.
27. ಮಕ್ಕಳ ಹಕ್ಕು, ಮಕ್ಕಳ ಸಂರಕ್ಷಣೆಯ ಅನುಷ್ಠಾನಕ್ಕಾಗಿ ಹಾಗೂ ಬಾಲ ಕಾರ್ಮಿಕತೆ ಮತ್ತು ಬಾಲ್ಯ ವಿವಾಹದ ನಿರ್ಮೂಲನೆಗಾಗಿ ಪಂಚಾಯತ್, ಸಮುದಾಯ ಮತ್ತು ಶಾಲಾ ಮಟ್ಟದಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮಗಳಿಗೆ ಕ್ರಮ ವಹಿಸುವುದು.
28. ಪಂಚಾಯತ್ ವ್ಯಾಪ್ತಿಯ ಎಲ್ಲಾ ಧಾರ್ಮಿಕ ಸ್ಥಳಗಳು, ಮದುವೆ, ಸಭಾಂಗಣಗಳಲ್ಲಿ ಬಾಲ್ಯ ವಿವಾಹ ನಿಷೇಧ ಕುರಿತು ಜಾಗೃತಿ ಫಲಕ ಹಾಕುವುದು ಹಾಗೂ ಅನುಸರಣೆ.
29. ಪಂಚಾಯತ್ ಮಟ್ಟದಲ್ಲಿ ಯಾವುದೇ ರೈತರು ಮತ್ತು ಕಾರ್ಮಿಕರು ಮಕ್ಕಳನ್ನು ಹೊಲ, ಗದ್ದೆ, ಜೀತ, ಸಂಬಳಕ್ಕೆ 18 ವರ್ಷದೊಳಗಿನ ಮಕ್ಕಳನ್ನು ದುಡಿಸದಂತೆ ಹಾಗೂ ದನ, ಕುರಿ, ಎಮ್ಮೆ ಮೇಯಿಸಲು ಮಕ್ಕಳನ್ನು ಬಳಸದಂತೆ ನಿರಂತರ ನಿಗಾವಹಿಸಿ 18 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ನಿರಂತರ ಶಿಕ್ಷಣ ಪಡೆಯಲು ಕ್ರಮ.
30. ಪಂಚಾಯತ್ ವ್ಯಾಪ್ತಿಯ ಎಲ್ಲಾ ಅಂಗನವಾಡಿಗಳಲ್ಲಿ 9 ರಿಂದ 18 ವರ್ಷದೊಳಗಿನ ಎಲ್ಲಾ ಬಾಲಕಿಯರನ್ನೊಳಗೊಂಡ ಕ್ರಿಯಾತ್ಮಕ ಬಾಲಿಕ/ಕಿಶೋರಿ ಸಂಘದ ರಚನೆ ಮತ್ತು ಅನುಷ್ಠಾನ.

ಮಕ್ಕಳ ಸಹಾಯವಾಣಿ
CHILD LINE 1098

**ಸೂಚನೆ 1 :** ಪ್ರತೀ ವರ್ಷ ನವೆಂಬರ್ ತಿಂಗಳಲ್ಲಿ **ಮಕ್ಕಳ ಗ್ರಾಮಸಭೆ** ಕಡ್ಡಾಯವಾಗಿ ಆಯೋಜಿಸಿ, ಮಕ್ಕಳ ಭಾಗವಹಿಸುವಿಕೆಯ ಹಕ್ಕನ್ನು ಖಾತ್ರಿಪಡಿಸಿ, ಪಂಚಾಯತ್ ವ್ಯಾಪ್ತಿಯಲ್ಲಿ 18 ವರ್ಷದೊಳಗಿನ ಮಕ್ಕಳ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದು. (ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ – 1993 (2015 ರ ತಿದ್ದುಪಡಿಯಂತೆ 3–ಹೆಚ್ 2 (1))

**ಸೂಚನೆ 2 :** ವರ್ಷದ 4 ಸಭೆಗಳಲ್ಲಿ ಮೇಲಿನ ಸದಸ್ಯರುಗಳಲ್ಲದೆ. ಅಗತ್ಯಕ್ಕನುಗುಣವಾಗಿ ತಾಲ್ಲೂಕು / ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕರೆಸುವುದು ಹಾಗೂ ವರ್ಷದ 2 ಸಭೆಗಾದರೂ ಕಾರ್ಮಿಕ ನಿರೀಕ್ಷಕರನ್ನು, ಕೃಷಿ ಅಧಿಕಾರಿ, ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರನ್ನು ಕರೆಸುವುದು.

**ಸೂಚನೆ 3 :** ಎಲ್ಲಾ ಹಂತದಲ್ಲಿ ನಿಮ್ಮ ಜಿಲ್ಲೆಯ **ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ,ಮಕ್ಕಳ ನ್ಯಾಯ ಮಂಡಳಿ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸಂಘ, ಕಾಣೆಯಾದ ಮಕ್ಕಳು ಬ್ಯೂರೋ, ಮಕ್ಕಳ ವಿಶೇಷ ಪೊಲೀಸ್ ಘಟಕ ಹಾಗೂ ಮಕ್ಕಳ ಸಹಾಯವಾಣಿ (✆ : 1098)**ಯ ಸಹಾಯ ಪಡೆಯುವುದು.

**ಸೂಚನೆ 4 :** ಮಕ್ಕಳ ಸಂರಕ್ಷಣೆ ಕುರಿತಾದ ದೂರುಗಳು ಹಾಗೂ ಮಾಹಿತಿಗಳು ಇದ್ದಲ್ಲಿ ಸಂಪರ್ಕಿಸಿ : ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು.
ದೂ : 080–22115291 / 92. ರಾಜ್ಯ ಬಾಲ ವಿವಾಹ ನಿಷೇಧ ಕೋಶ : 080–22351098, ರಾಜ್ಯ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನಾ ಸೊಸೈಟಿ ದೂ : 080–22453549

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ, ಎಲ್ಲರೂ ಬೆಳೆಯೋಣ

unicef
for every child

ಮಕ್ಕಳ ಸಂರಕ್ಷಣೆ ಕುರಿತಾದ ಕಾನೂನು, ನೀತಿ, ಸುತ್ತೋಲೆಗಳು, ಕಿರುಚಿತ್ರ, ಧ್ವನಿ ಸುರುಳಿ, ಜಾಗೃತಿ ಸಾಹಿತ್ಯ, ಮತ್ತು ಪಠ್ಯ ಸಾಮಾಗ್ರಿಗಳನ್ನು ಈ ವೆಬ್‌ಸೈಟ್‌ನಿಂದ ಪಡೆದುಕೊಳ್ಳಿ : **www.makkalahakku.com**

ಪ್ರಕಟಣೆ, ಅನುಷ್ಠಾನದ ಜವಾಬ್ದಾರಿ ಮತ್ತು ಸಹಭಾಗಿತ್ವ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಕಂದಾಯ, ಸಾರ್ವಜನಿಕ ಶಿಕ್ಷಣ, ಕಾರ್ಮಿಕ, ಪೊಲೀಸ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳು ಹಾಗೂ ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಕರ್ನಾಟಕ ಸರ್ಕಾರ, ಬೆಂಗಳೂರು.